# ಬಿ.ಬಿ.ಎ
# ಮೊದಲನೇ ಸೆಮಿಸ್ಟರ್





## ಪರಿವಿಡಿ

### I. ಕಾವ್ಯ ಭಾಗ


೧. ಸಂಧಿಮಾಟ್ಟುದುತ್ತಮ ಪಕ್ಷಂ – ರನ್ನ ೧–೬
೩. ವಚನಗಳು – ಬಸವಣ್ಣ, ಅಕ್ಕಮಹಾದೇವಿ ೭–೧೧
೨. ತುಂಗಭದ್ರೆ – ಕೆ.ಎಸ್. ನರಸಿಂಹಸ್ವಾಮಿ ೧೨–೧೪
೪. ವರ್ಧಮಾನ – ಎಂ. ಗೋಪಾಲಕೃಷ್ಣ ಅಡಿಗ ೧೫–೧೮


### II. ಕಥಾ ಸಾಹಿತ್ಯ


೧. ನಾಲ್ಕು ಮೊಳ ಭೂಮಿ – ಚದುರಂಗ ೧೯–೨೯
೨. ಅಂಕ – ಬೊಳುವಾರು ಮಹಮದ್ ಕುಂಞ ೩೧–೪೭
೩. ಅಕ್ಕು – ವೈದೇಹಿ ೪೮–೬೦


### III. ಜಾನಪದ


೧. ಘಾಟಿ ಸೊಸೆ – ಜನಪದ ಕತೆ ೬೧–೭೦
೨. ಲಾವಣಿ – ಹಲಗಲಿಯ ಬೇಡರು ೭೧–೭೭
೩. ಒಂದು ಅಪೂರ್ವ ಕಥನಗೀತೆ – "ಗರತಿಗಂಗವ್ವ" – ಸಿ.ಪಿ.ಕೆ ೭೮–೮೩


### IV. ಲೇಖನ ವೈವಿಧ್ಯ


೧. ನಮಗೆ ಬೇಕಾಗಿರುವ ಇಂಗ್ಲಿಷ್ – ಕುವೆಂಪು ೮೪–೯೨
೨. ವೃತ್ತ ಪತ್ರಿಕಾ ಸ್ವಾತಂತ್ರ್ಯ – ಡಿ.ವಿ.ಜಿ ೯೩–೧೦೩
೩. ಇದೆಲ್ಲ ಹೇಗೆ ಶುರುವಾಯಿತು! – ಎಂ.ಆರ್. ಕಮಲ (ಮೂಲ: ರೋಸಾಪಾರ್ಕ್) ೧೦೪–೧೧೪

# I. ಕಾವ್ಯ ಭಾಗ

## ೧. ಸಂಧಿಮಾಳ್ಪುದುತ್ತಮ ಪಕ್ಷಂ

– ರನ್ನ

**ಆಶಯ :**

ರನ್ನನ 'ಸಾಹಸ ಭೀಮ ವಿಜಯಂ' ಓದುಗನ ಮನಸ್ಸಿಗೆ ಹತ್ತಿರವಾಗುವುದು ಅದರ ನಾಟಕೀಯ ಗುಣದಿಂದ ಮತ್ತು ದುರಂತ ನಾಯಕನಾದ ದುರ್ಯೋಧನನ ಪಾತ್ರ ಚಿತ್ರಣದಿಂದ. ಈ ಎರಡು ಅಂಶಗಳು ಅತ್ಯಂತ ಸಮರ್ಥವಾಗಿ ವ್ಯಕ್ತಗೊಂಡಿರುವ ಹಲವು ಸನ್ನಿವೇಶಗಳು ಕೃತಿಯ ಉದ್ದಕ್ಕೂ ಇವೆ. ದುರ್ಯೋಧನ 'ನೆಲಕಿಚಿರುವೆನೆಂದು ಬಗೆದಿರೆ ಚಲಕಿಚೆವೆಂ' ಎಂದು ಹೇಳುವ ಮೂಲಕ ಸಹೃದಯರ ಮನಗೆಲ್ಲುತ್ತಾನೆ.

"ಮನುಷ್ಯರಲ್ಲಿ ದೊಡ್ಡವರು, ಸಣ್ಣವರು, ಖ್ಯಾತರು, ಅನಾಮಿಕರು ಎಂಬೆಲ್ಲಾ ಗೆರೆಗಳನ್ನು ದಾಟಿ, ಅತ್ಯಂತ ಸಾಮಾನ್ಯ ವ್ಯಕ್ತಿಯಲ್ಲಿ ಕೂಡ ಘನತೆಯ ಮಾನವೀಯತೆಯ ಕಿರಣವಿರುವುದನ್ನು ಆತ ಸಾವಿನ ತೆಕ್ಕೆಯಲ್ಲಿದ್ದಾಗ, ಪ್ರಕೃತಿಯ ವಿನಾಶಕರ ಅಪ್ಪಣೆಯಲ್ಲಿದ್ದಾಗ ಕಾಣುತ್ತೇವೆ." ಎಂಬ ಪಿ ಲಂಕೇಶರ ಮಾತನ್ನು ಇಲ್ಲಿ ನೆನೆಯಬಹುದು. ಕುರುಕ್ಷೇತ್ರ ಯುದ್ಧದಲ್ಲಿ ತನ್ನವರನ್ನೆಲ್ಲಾ ಕಳೆದುಕೊಂಡ ದುರ್ಯೋಧನನ ಮಾನವತೆ, ಆತ್ಮಾಭಿಮಾನ ,ಛಲ, ಸೇಡು ಹಲವು ಕಾಲ ಮನಸ್ಸಿನಲ್ಲಿ ಉಳಿಯುತ್ತದೆ.

ಪ್ರಸ್ತುತ ಭಾಗವನ್ನು 'ಗದಾಯುದ್ಧ'ದ ಎರಡು ಮತ್ತು ಮೂರನೇ ಆಶ್ವಾಸಗಳಿಂದ ಆಯ್ದುಕೊಳ್ಳಲಾಗಿದೆ. ಯುದ್ಧಭೂಮಿಯಲ್ಲಿ ಒಬ್ಬಂಟಿಯಾಗಿ ತೊಳಲಾಡುತ್ತಿದ್ದ ದುರ್ಯೋಧನನನ್ನು ಸಂಜಯ ಭೇಟಿಯಾಗುವ ಸಂದರ್ಭವನ್ನು ಇಲ್ಲಿ ಸಂಗ್ರಹಿಸಲಾಗಿದೆ. ಸಂಜಯನ 'ಸಂದಿಮಾಳ್ಪುದುತ್ತಮ ಪಕ್ಷಂ, ಎಂಬ ವಿವೇಕದ ನುಡಿಗಳನ್ನು ತಿರಸ್ಕರಿಸುವ ದುರ್ಯೋಧನ, ಪಾಂಡವರ ವಿರುದ್ಧ ಸಿಡಿದೇಳುತ್ತಾನೆ. ಪಾಂಡವರ ಅಸಮರ್ಥತೆಯನ್ನು ಎತ್ತಿ ತೋರುತ್ತಾ ಯುದ್ಧ ಮಾಡುವ ನಿರ್ಣಯವನ್ನೇ ತೆಗೆದುಕೊಳ್ಳುತ್ತಾನೆ. ಪ್ರತಿನಾಯಕನಾಗಿ ತನ್ನ ಆತ್ಮಾಭಿಮಾನದಿಂದ ಓದುಗರ ಮನವನ್ನು ದುರ್ಯೋಧನನ ಪಾತ್ರ ಗೆದ್ದರೂ ಮನುಷ್ಯನ ಅಧಿಕಾರದಾಹ, ಲೋಲುಪತೆ, ಆಸೆಬುರುಕತನ, ದುಷ್ಟತನ, ದ್ವೇಷ, ಹಟಮಾರಿತನಗಳ ಪರಿಣಾಮಗಳ ಬಗ್ಗೆಯೂ ನಮ್ಮನ್ನು ಚಿಂತನೆಗೆ ಹಚ್ಚುತ್ತದೆ.



ಧೃತರಾಷ್ಟ್ರಂ ದ್ರುಮಮಾದುದು ।
ಶತಶಾಖಂ ಪಂಚಶಾಖಮಾದುದು ಪಾಂಡು ॥
ಕ್ಷಿತಿರುಹಮಕ್ಷಯಮಾಯ್ತಾ ।
ದ್ವಿತೀಯಮಾಯ್ತೇಕಶಾಖಮಿವನಿಂದಾದ್ಯಂ

ವ॥ ಎಂದು ಸಂಜಯಂ ಕುರುರಾಜನಂ ನೋಡಿ

ನೃಪ ನಿನ್ನಂ ಪಿಡಿದುಯ್ಯೆ ಭಾನುಮತಿಯಂ ಸಂತೈಸಿ ಚಿತ್ರಾಂಗದಂ ।
ಗುಪಯೋಗಾಸ್ತ್ರಮನೆಚ್ಚು ಕೂಡೆ ನಭದಿಂ ಗಾಂಡೀವಿ ತರ್ಪಾಗಳೀ ॥
ಕೃಪನೀ ಸೈಂಧವನೀ ಸರಿತ್ತನಯನೀ ರಾಧೆಯನೀ ಮದ್ರಭೂ ।
ಮಿಪನೀ ಕುಂಭಜನೀ ಕುರುಪ್ರಭವರಂದೇಂ ಹಮ್ಮದಂಬೋದರೇ

ಮೃಡನೊಳ್ ಪಾಶುಪತಾಸ್ತ್ರಂ ।
ಬಡೆದಂ ತ್ರಿದಶಾಧಿಪತಿಯೊಳರ್ಧಾಸನಮಂ ॥
ಪಡೆದಂ ನಾರಾಯಣನೊಳ್ ।
ಪಡೆದಂ ಗಾಂಡಿವಿ ಸುಭದ್ರೆಯಂ ಭದ್ರಮನಂ

ಉರಿ ಕೊಳೆ ಕೋಟ್ಟೆಗಂ ಕೊಳೆ ವಿಷಾಹಿಕುಳಂ ಕೊಳೆ ಶತ್ರು ಭೂಮಿಯೊಳ್
ಗಿರಿಗಹನಂಗಳೊಳ್ ವಿಷಮರಾಕ್ಷಸಸಂಕುಲದೊಳ್ ವರಾಹಸಿಂ ॥
ಧುರ(ಖ)ರಶಯ್ಯೆಯೊಳ್ ವಿಪುಲಭೀಕರದೊಳ್ ನಿಜಬಾಹುವಜ್ರಪಂ ।
ಜರದೊಳಗಿಟ್ಟು ರಕ್ಷಿಸಿದನಲ್ತೆ ಸಹೋದರರಂ ವೃಕೋದರಂ

ಬಕನಂ ಹಿಡಿಂಬನಂ ಕೀ ।
ಚಕನಂ ಕಿಮ್ಮೀರನಂ ಜಟಾಸುರನಂ ಕೊಂ ॥
ದ ಕಲಿ ಜರಾಸಂಧನನಿ ।
ಕ್ಕಿ ಕೊಂದ ಬಲ್ಲಾಳ್ ಮರುತ್ಸುತಂ ಕೇವಳನೇ

ಯಮರಾಜಂ ತಂದೆ ಭೋಜಪ್ರಭವೆ ತನಗೆ ತಾಯ್ ಮಯ್ದುನಂ
ವಾಸುದೇವಂ ।
ಸಮರಕ್ರೀಡಾರ್ಥದಭ್ಯರ್ಥನೆಯಮಳನುಜರ್ ಸಂದ ಭೀಮಾರ್ಜುನರ್ ಕೋ।

ಪಮವಂಧ್ಯಂ ಚಾಪವಿದ್ಯಾಗುರು ಕಳಶನೆಂದಂದು ಸಾಮಾನ್ಯನಲ್ಲಂ
ಹಿಮಕೃದ್ವಂಶಾವತಾರಂ ಭರತಕುಲಶಿರಶ್ಶೈಖರಂ ಧರ್ಮಪುತ್ರಂ

ಅಮಳ್ಗಳ್ ವಿನಯದ ವಿಕ್ರಮ ।
ದಮಳ್ಗಳವರ್ ಮುಳಿಯೆ ಗಂಡರಿಲ್ಲವರ ಪರಾ ॥
ಕ್ರಮಮಂ ನೀನಱಿದಿರ್ದುಂ ।
ಸಮರದೊಳಿಳಿಸುವುದೆ ಕುರುಕುಲಂಬರಭಾನೂ

ವ॥ ಎಂದು ನುಡಿದ ಸಂಜಯನ ನುಡಿಗೆ ಫಣಿರಾಜಕೇತನಂ ಸಿಡಿಲ್ದು

ತನಗೆ ಹತೋಶ್ವತ್ಥಾಮೋ ।
ಯೆನಲಕ್ಕುಮೆ ಯಮಪುರಕ್ಕೆ ಗುರುಪೋಪೆಡೆಯೊಳ್ ॥
ಘನಕುಂಜರ ಎಂದೆಂಗುಮೆ ।
ಜನರಂಜನೆಗಱಿಯಲಾದುದಿಲ್ಲಱಿಮಗನಂ

ಈ ದೊರೆಯಱಿಮಗನುಂ ಮೃಷ ।
ವಾದಂ ನೋಡೆಂದು ಧರ್ಮನಂ ಮೂದಲಿಸಲ್ ॥
ಪೋದಂ ಪುತ್ರನನಱಸಲ್ ।
ಪೋದನೆ ಯಮಪುರಕೆ ಮುಕ್ತಬಾಣಂ ದ್ರೋಣಂ

ವನಿತೆಯ ಕೇಶಮಂ ಸಭೆಯೊಳೆನ್ನನುಜಂ ತೆಗೆವಲ್ಲಿ ಗಂಡನಾ ॥
ಗನೆ ಭಗದತ್ತನಾನೆ ಬರಿಯೆಲ್ವುಡಿವನ್ನೆಗಮೊತ್ತೆ ಗಂಡನಾ ॥
ಗನೆ ಕೊಲಲೊಲ್ಲದಂಗಪತಿ ಬಿಲ್ಲೊಳೆ ಕೊಂಡೆಟೆವಲ್ಲಿ ಗಂಡನಾ ।
ಗನೆ ಕುರುಬಾಲಸಂಹರಣಮಾತ್ರದೆ ಮಾರುತಿ ಗಂಡನಾದನೇ

ಗುರುವಂ ಪ್ರೋಜ್ಝಿತಚಾಪನಂ ಪುಸಿದು ಕೊಂದಾ ಬೀರಮಂ ಭೀಷ್ಮರಂ
ಶರಶಯ್ಯಾಗತರಂ ಕರುತ್ತು ಗುಱಿಯೆಚ್ಚಾ ಪೊಚ್ಚಱಂ ಕರ್ಣನಂ ॥
ವಿರಥಜ್ಯಾಯುಧನೆನ್ನದೆಚ್ಚು ತಲೆಗೊಂಡಾ ಶೌರ್ಯಮಂ ಪಾಂಡುಪು।
ತ್ರರೆ ಬಲ್ಲರ್ ಮೆಱೆಯಲ್ಕೆ ಸಾಹಸಧನಂ ದುರ್ಯೋಧನಂ ಬಲ್ಲನೇ

ಸೊಕಮಿರ್ಕಕ್ಕಟ ದರ್ಭಪಾಣಿ ಯಮಜಂ ದರ್ವಿಕರಂ ವಾಯುಪು ।
ತ್ರಕನುಂ ಜರ್ಜರಹಸ್ತನಿಂದ್ರತನಯಂ ದಸ್ರಾತ್ಮಜರ್ ದಂಡಮು ॥



ಷ್ಟಿಕರರ್ ಶಸ್ತ್ರವಿಡಂಬಮೇವುದವರ್ಗಂ ಪಾಂಚಾಲಿಯುಂ ಗಂಧದಾ ।
ಯಕಿಯಾಗಿರ್ಪಿನಮಂದು ಮತ್ಸ್ಯಗೃಹದಿಂದೀ ನಿಗ್ರಹಂ ಪೊಲ್ಲದೇ

ವ॥ ಎಂದು ದುರ್ಯೋಧನಂ ಸಮರೋದ್ಯೋಗಂಗೆಯ್ಯೆ ಸಂಜಯನಂಜದೆ ಮಾರ್ಕೊಂಡು–

ಪ್ರತಿಕೂಲದೈವನ್ಯೆ ನೀಂ ।
ಪ್ರತಿನೃಪರನುಕೂಲದೈವರಸಹಾಯನೆ ನೀಂ ॥
ಪ್ರತಿನೃಪರಸಹಾಯರ್ ನೀಂ ।
ಪ್ರತಿಬಲನದಱಿಂದನರ್ಥಕಂ ವಾಕ್ಯಾರ್ಥಂ

ವ॥ ಎಂದು ನುಡಿದ ಸಂಜಯನ ನುಡಿ ಕರ್ಣಕಠೋರವಾಗೆ ದುರ್ಯೋಧನನದರ್ಕೆ ನಿರ್ವೈಸಿ–

ಸಮರಜಯಂ ದೈವಾಯ ।
ತ್ತಮದಱಿನಾ ಪುರುಷಕಾರಮೆಮಗಾಯ್ತಿಗಳ್ ॥
ಯಮನಂದನಾದಿಗಳೊಳೊಂ ।
ದೆ ಮೆಯ್ಯೊಳಾಂತಿಱಿವೆನೆನ್ನ ಚಲಮಂ ಮೆಱೆವೆಂ

ಸುರ ಸಿಂಧೂದ್ಭವ ಕುಂಭಜನ್ಮ ದಿನಕೃತ್ಪುತ್ರಾದಿಗಳ್ ಸಾಯೆ ಸಂ ।
ಗರದೊಳ್ ಪಾಂಡವರಂ ಗೆಲಲ್ ನೆಱೆದನಿಲ್ಲೇಕಾಕಿ ದುರ್ಯೋಧನಂ ।
ಸೆರಗಂ ಸಾರ್ದಪನೆಂಗುಮೀ ಧರೆ ಭುಜಾದಂಡಂ ಗದಾದಂಡಮೆಂ ।
ಬೆರಡುಂ ಸಂಜಯ ಮಜ್ಜಯಕ್ಕೊದವಿರಲ್ ಮತ್ತನ್ಯರಂ ಪಾರ್ವನೇ

ವ॥ ಎಂದು ನುಡಿದು ಕಾಲದಂಡಪ್ರಚಂಡಮಪ್ಪ ತನ್ನ ಗದಾದಂಡಮಂ ಭುಜಾದಂಡ ದೊಳಳವಡಿಸಿಕೊಂಡು ಪಾಂಡವರ್ಗಭಿಮುಖನಾಗಿ ನಡೆವ ಪನ್ನಗಪಾತಕನ ಮುಳಿಸಿ ನಂದವನಱಿದು ಸಂಜಯನಂಜದೆ ಮಾರ್ಕೊಂಡು

ಪವನಾತ್ಮಜಂ ಮಹಾರಥ ।
ನವನಿಪ ನೀಂ ಸಮರಥನೆ ಅದರ್ಕಧಿಕನೊಳಾ ॥
ಪವನಾತ್ಮಜನೊಳ್ ಮಱೆ ಬ ।
ದ್ಧವೈರಮಂ ಸಂಧಿಮಾಟ್ಪುದುತ್ತಮಪಕ್ಷಂ

ವ॥ ಎಂದು ನುಡಿದ ಸಂಜಯನ ನುಡಿಗೆ ಪಿಂಗಾಕ್ಷನತಿವಿಷಮಪರುಷವೇಷಾವೇಶಧರನಾಗಿ–

ಅತಿರಥನಾತಂ ಗಡ ಬಲ ।
ಯುತ ಸಮರಥನೆನ್ನೊಳಧಿಕಬಲವಂತಂ ಮಾ ॥
ರುತಿ ಗಡ ಮಹಾರಥಂ ಮಾ ।
ರುತಿಯುಂ ತದ್ರಥದ ಗಾಲಿಗಳ್ ದೊಡ್ಡಿದುವೇ

ಪೆಱರಂ ಪೊಗಟ್ಟಿಪೆಯೆಮ್ಮಂ ।
ಕಿಱಿಯರ್ ಮಾಡಿದಪೆಯೆಲವೊ ಸಂಜಯ ನೀನುಂ ॥
ಪೆಱನೊರ್ವಂ ಬಿಲ್ಲೋಜಂ ।
ಪೆಱನೊರ್ವಂ ಸಿಂಧುಪುತ್ರನಾಗಲ್ ಬಗೆವೋ

ನಿನ್ನ ಮಹಾರಥನಳವುಮ ।
ನೆನ್ನಳವುಮನಱಿಯದಿಟೆಸಿ ಸಮರಥನೆಂದಯ್ ॥
ಮುನ್ನಂ ನಿನಗಾಂ ಪೊಸತೇ ।
ಪನ್ನಗಕೇತನನೊಳಾಂಪ ಗಂಡರುಮೊಳರೇ

## ಕವಿ ಪರಿಚಯ

**ರನ್ನ:** ಮುದುವಳಲಿನಲ್ಲಿ (ಈಗಿನ ಮುಧೋಳ) ಬಳೆಗಾರ ಕುಟುಂಬದಲ್ಲಿ ಕ್ರಿ.ಶ. ೯೪೯ ರಲ್ಲಿ ಹುಟ್ಟಿದವನು ಕವಿ ರನ್ನ. ಬಾಲ್ಯದಿಂದಲೂ ಈತನು ವಿದ್ಯಾಭ್ಯಾಸದಲ್ಲಿ ತೊಡಗಿ, ತನ್ನ ಕವಿತ್ವ ಮತ್ತು ಪಾಂಡಿತ್ಯಗಳೆರಡರಿಂದಲೂ ಉಭಯ ಕವಿಯೆಂದು ಪ್ರಸಿದ್ಧನಾಗಿ, ಸಾಮಂತರಾಜರಲ್ಲಿಯೂ, ಮಂಡಲೇಶ್ವರರಲ್ಲಿಯೂ ಆಶ್ರಯ ಪಡೆದು, ಕ್ರಮೇಣ ಅಭಿವೃದ್ಧಿ ಹೊಂದುತ್ತಾ ಚಾಲುಕ್ಯ ಚಕ್ರವರ್ತಿ ತೈಲಪನ ಆಸ್ಥಾನದಲ್ಲಿ ಕವಿಚಕ್ರವರ್ತಿಯೆಂಬ ಹೆಸರನ್ನು ಪಡೆದನು. ಇವನಿಗೆ ಶಾಂತಿ ಮತ್ತು ಜಕ್ಕಿ ಎಂಬ ಇಬ್ಬರು ಹೆಂಡತಿಯರಿದ್ದರು. ರಾಯ ಎಂಬ ಮಗನೂ ಅತ್ತಿಮಬ್ಬೆ ಎಂಬ ಮಗಳೂ ಇದ್ದರು. ಅಜಿತ ಪುರಾಣ, ಗದಾಯುದ್ದ ಅಥವಾ ಸಾಹಸಭೀಮ ವಿಜಯ ಇವು ರನ್ನನ ಉಪಲಬ್ಧ ಕೃತಿಗಳು. ಪರಶುರಾಮಚರಿತ, ಚಕ್ರೇಶ್ವರ ಚರಿತ ಈವರೆಗೂ ದೊರೆತಿಲ್ಲ. 'ರನ್ನಕಂದ'ದ ಭಾಗ ದೊರೆತಿದ್ದರೂ ಇದು ರನ್ನನೇ ರಚಿಸಿರುವ ಕೃತಿಯೆಂಬುದು ನಿರ್ಣಯವಾಗಿಲ್ಲ. ಇವನು ಕಾವ್ಯ ರಚನೆಯಲ್ಲಿ ಪಂಪನ ಪರಂಪರೆಯನ್ನೇ ಅನುಸರಿಸಿದ್ದರೂ ನಾಟಕೀಯ ಗುಣದಿಂದಾಗಿ ಸತ್ವಯುತ ಕವಿಯಾಗಿದ್ದಾನೆ.



## ಕಠಿಣ ಪದಗಳ ಅರ್ಥ :

ಧ್ರುಮ–ಮರ, ಉಪಯೋಗಾಸ್ತ್ರ–ಒಂದು ಅಸ್ತ್ರ. ಸರಿತ್ ತನಯ–ಭೀಷ್ಮ, ಹಮ್ಮದಂ ಬೋದರೇ–ಮೂರ್ಛೆ ಹೋಗಿದ್ದರೆ?, ಮೃಡ – ಶಿವ, ತ್ರಿದಶಾಧಿಪತಿ, ಇಂದ್ರಕೊಳೆ–ಹಿಡಿಯಲು, ಕೋಲ್ಮುಗಂ–ಕೋಡುಳ್ಳ ಮೃಗ, ಖಡ್ಗ ಮೃಗ, ವಿಷಾಹಿಕುಳಂ–ವಿಷಸರ್ಪ ಸಂಕುಲ, ವರಾಹ ಸಿಂಧೂರ– ಕಾಡು ಹಂದಿಗಳ ಮತ್ತು ಆನೆಗಳ ಖರ–ಕಠಿಣವಾದ, ಬಲ್ಲಾಳ್–ಬಲಿಷ್ಠನಾದ ಪುರುಷ, ಬೋಜ ಪ್ರಭವೆ – ಭೋಜರಾಜನ ಮಗಳು, ಚಾಪ ವಿದ್ಯಾ ಗುರು–ದ್ರೋಣ, ಅಮಳ್ಗಳ್ – ಅವಳಿ ಜವಳಿ ಎಂದರೆ ನಕುಲ – ಸಹದೇವರು, ಇಳಿಸು – ತಿರಸ್ಕರಿಸು, ಕುರುಕುಲಾಂಬರ ಭಾನು – ಕುರುವಂಶವೆಂಬ ಗಗನಕ್ಕೆ ಸೂರ್ಯನಂತೆ ಇರುವ ದುರ್ಯೋಧನ, ಕುಂಜರ – ಆನೆ, ಅಱಮಗ – ಧರ್ಮರಾಯ ಈ ದೊರೆಯ – ಯೋಗ್ಯತೆಯುಳ್ಳ, ಮೃಷನಾದಂ – ಸುಳ್ಳುಗಾರನಾದನು ಕುರು ಬಾಲ – ಈ ಕುರುವಂಶದ ಬಾಲಕರು, (ದುರ್ಯೋಧನನ ತಮ್ಮಂದಿರು) ಮಾರುತಿ – ವಾಯುಪುತ್ರ ಭೀಮ ಕರುತ್ತು – ಕೋಪಗೊಂಡು ತಲೆಗೊಂಡ, ತಲೆಗೊಂಡ – ತಲೆಯನ್ನು ತೆಗೆದ, ಸೊಕಂ ಇರ್ಕೆಂ – ಸುಖವಾಗಿರಲಿ, ಗಂಧದಾಯಕಿ – ಸುಗಂಧವನ್ನು ಕೊಡುವ ಸೇವಕಿ, ಪ್ರತಿ ನೃಪರು – ಎದುರು ಪಕ್ಷದ ರಾಜರು, ಪುರುಷಕಾರ – ಪುರುಷ ಪ್ರಯತ್ನ, ಅಂತು ಇಱಿವೆನ್ – ಪ್ರತಿಭಟಿಸಿ ಯುದ್ಧ ಮಾಡುತ್ತೇನೆ.

## ಪ್ರಶ್ನೆಗಳು :

೧. ಪಾಂಡವರ ಸಾಮರ್ಥ್ಯವನ್ನು ಸಂಜಯನು ಹೇಗೆ ಚಿತ್ರಿಸುತ್ತಾನೆ?

೨. ಪಾಂಡವರ ಸಾಮರ್ಥ್ಯಗಳನ್ನು ದುರ್ಯೋಧನಿಗೆ ಅರ್ಥ ಮಾಡಿಸುವ ಸಂಜಯನ ಪ್ರಯತ್ನಕ್ಕೆ ದುರ್ಯೋಧನನ ಪ್ರತಿಕ್ರಿಯೆ ಏನು?

೩. ದುರ್ಯೋಧನನ ಛಲ ಪ್ರಸ್ತುತ ಕಾವ್ಯಭಾಗದಲ್ಲಿ ಹೇಗೆ ಮೂಡಿ ಬಂದಿದೆ?

೪. 'ಸಂಧಿಮಾಟ್ಪುದುತ್ತಮ ಪಕ್ಷಂ' ಎಂದು ಸಂಜಯ ಹೇಳಲು ಕಾರಣವೇನು?

೫. ದುರ್ಯೋಧನನ ಛಲ ಸಮಷ್ಠಿಯ ಹಿತಕ್ಕೆ ಧಕ್ಕೆ ತರುವಂತಹುದೆ? ಚರ್ಚಿಸಿ.

೬. 'ಮನುಷ್ಯನ ಹಠ, ಅಭಿಮಾನ, ಛಲಗಳು ಕೆಲವೊಮ್ಮೆ ರಕ್ತಪಾತ, ಅಶಾಂತಿಗಳಿಗೆ ಕಾರಣವಾಗುತ್ತದೆ' –ಈ ಮಾತನ್ನು ಸಮಕಾಲೀನ ಸಂದರ್ಭದ ಹಿನ್ನೆಯಲ್ಲಿ ಚರ್ಚಿಸಿ.

*

# ೨. ವಚನಗಳು

**ಆಶಯ :**

'ವಚನ' – ಕನ್ನಡ ಸಾಹಿತ್ಯ ಪ್ರಕಾರಗಳಲ್ಲಿ ಒಂದು. ಅದರ ಅರ್ಥ ಮಾತು, ವ್ಯಕ್ತಪಡಿಸು ಎಂದು. ವಾಸ್ತವವಾಗಿ ವಚನವೆಂದರೆ ಗದ್ಯವಾದರೂ ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಅದಕ್ಕೆ ಒಂದು ವಿಶಿಷ್ಟ ಬಂಧ ಶಿಲ್ಪವಿದೆ. ೧೨ ನೇಶತಮಾನದಲ್ಲಿ ಕರ್ನಾಟಕದ ಸಾಮಾಜಿಕ, ಧಾರ್ಮಿಕ ಆಂದೋಲನಕ್ಕೆ ಕಾರಣವಾದ ಒಂದು ವಿಶಿಷ್ಟ ಸಾಹಿತ್ಯ ಪರಂಪರೆ. ಈ ಪರಂಪರೆಯಲ್ಲಿ ದೊರೆತಿರುವ ಮೊಟ್ಟ ಮೊದಲ ವಚನಕಾರ ದೇವರ ದಾಸಿಮಯ್ಯ. ನಂತರದಲ್ಲಿ ಸಕಲೇಶ ಮಾದರಸ, ಅಲ್ಲಮಪ್ರಭು, ಬಸವಣ್ಣ, ಅಕ್ಕಮಹಾದೇವಿ, ಚೆನ್ನ ಬಸವಣ್ಣ, ಸಿದ್ಧರಾಮಯ್ಯ ಮುಂತಾದವರು.

ವಚನಕಾರರಲ್ಲಿ ಅಗ್ರಗಣ್ಯನಾದ ಬಸವಣ್ಣ, ಅಕ್ಕಮಹಾದೇವಿಯವರ ವಚನಗಳು, ಸರಳ, ಸುಲಭ, ಸದಾಚಾರಸ್ಮೃತಿಗಳು. ಸಮಾಜದಲ್ಲಿನ ಅಜ್ಞಾನ ಅಂಧಕಾರಗಳನ್ನು ತೊಡೆದು ಹಾಕಲು ಲಿಂಗ ನಿಷ್ಠೆ, ಅಂತರಂಗ ಶುದ್ಧಿ, ಆತ್ಮವಿಮರ್ಶೆ, ಸಮಾನತೆಯ ಸಮಾಜದ ನಿರ್ಮಾಣ ಇವರ ವಚನಗಳ ಆಶಯ. ಭಾರತದಲ್ಲಿ ಜಾತಿ ತಾರತಮ್ಯ, ವರ್ಣಭೇದಗಳೇ ಪ್ರಧಾನವಾಗಿ ರೋಗಗ್ರಸ್ತ ಸಾಮಾಜಿಕ ವ್ಯವಸ್ಥೆ ನಿರ್ಮಾಣವಾಗಿದ್ದು, ಅದನ್ನು ತೊಡೆದು ಹಾಕಲು ವಚನಕಾರರು ಕಂಕಣ ಬದ್ಧರಾಗಿದ್ದರು. ಇಂದಿಗೂ ಅದೇ ಅಸಮಾನತೆಯ ಕಂದರದಲ್ಲಿ ಬಿದ್ದಿರುವ ಭಾರತದ ವರ್ಣವ್ಯವಸ್ಥೆ ಸುಧಾರಣೆಗೆ ವಚನಗಳ ಅಧ್ಯಯನ ಹೆಚ್ಚು ಪ್ರಸ್ತುತವೆನಿಸುತ್ತದೆ. ಕನ್ನಡಕ್ಕೆ ಅನುಭವದ ಹೊಸಕ್ಷೇತ್ರ, ಅಭಿವ್ಯಕ್ತಿಗೆ ಜನರ ಭಾಷೆಯ ಅಗತ್ಯವನ್ನು ಮನಗಾಣಿಸುತ್ತದೆ. ಹೀಗಾಗಿ ವಚನಗಳು ಸಾಮಾನ್ಯ ಜನತೆಗೆ ವೇದ, ಆಗಮ, ಶಾಸ್ತ್ರ, ಪುರಾಣ, ಕಾವ್ಯಗಳಾದ ಬಗೆಯನ್ನು ಗುರುತಿಸಬಹುದು.



## ಬಸವಣ್ಣ

ಸಗಣಿಯ ಬೆನಕನ ಮಾಡಿ
ಸಂಪಿಗೆಯರಳಲ್ಲಿ ಪೂಜಿಸಿದರೆ
ರಂಜನೆಯಹುದಲ್ಲದೆ, ಅದರ ಗಂಜಳ
ಬಿಡದಣ್ಣ!! ಲೋಕದ
ಮಾನವಂಗೆ ಶಿವದೀಕ್ಷೆಯ ಕೊಟ್ಟರೆ
ಆ ಕೆಟ್ಟವನೇಕೆ ಸದ್ಭಕ್ತನಹನು
ಕೂಡಲಸಂಗಮದೇವಾ?

ಒಳಗೆ ಕುಟಿಲ, ಹೊರಗೆ ವಿನಯವಾಗಿ
ಭಕ್ತರೆನಿಸಿಕೊಂಬವರನೊಲ್ಲನಯ್ಯಾ
ಲಿಂಗವು! ಅವರು ಸತ್ವಥಕ್ಕೆ
ಸಲ್ಲರು ಸಲ್ಲರಯ್ಯ!
ಒಳಹೊರಗೊಂದಾಗದವರಿಗೆ
ಅಳಿಯಾಸೆದೋರಿ ಬೀಸಾಡುವನವರ
ಜಗದೀಶ ಕೂಡಲಸಂಗಮದೇವ

ಹಲವು ಕಾಲ ಹಂಸೆಯ
ಸಂಗದಲಿದ್ದರೇನು ಬಕ
ಶುಚಿಯಾಗಬಲ್ಲುದೆ?
ಗಂಗಾನದಿಯಲ್ಲಿದ್ದರೇನು ಪಾಷಾಣ
ಮೃದುವಾಗಬಲ್ಲುದೇ? ಕಲ್ಪತರುವಿನ
ಸನ್ನಿಧಿಯಲ್ಲಿದ್ದರೇನು ಒಣ ಕೊರಡು
ಕೊನರಿ ಫಲವಾಗಬಲ್ಲುದೇ?
ಕಾಶಿಕ್ಷೇತ್ರದಲ್ಲಿ ಒಂದು
ಶುನಕವಿದ್ದರೇನು? ಅದರ ಹಾಲು
ಪಂಚಾಮೃತಕ್ಕೆ ಸಲುವುದೇ?
ತೀರ್ಥದಲೊಂದು ಗಾರ್ದಭನಿದ್ದರೇನು
ಕಾರಣಿಕನಾಗಬಲ್ಲುದೇ?
ಖಂಡುಗ ಹಾಲೊಳಗೊಂದು

ಇದ್ದಲಿದ್ದರೇನು? ಅದು
ಬಿಳುಹಾಗಬಲ್ಲುದೆ? ಇದು
ಕಾರಣ – ಕೂಡಲಸಂಗನ ಶರಣರ
ಸನ್ನಿಧಿಯಲ್ಲಿ ಅಸಜ್ಜನನಿದ್ದರೇನು
ಸದ್ಭಕ್ತನಾಗಬಲ್ಲನೇ?

ನಂಬರು, ನಚ್ಚರು; ಬರಿದೆ ಕರೆವರು;
ನಂಬಲರಿಯರೀ ಲೋಕದ
ಮನುಜರು! ನಂಬಿ ಕರೆದಡೆ, ಓ
ಎನ್ನನೇ ಶಿವನು? ನಂಬದೆ, ನಚ್ಚದೆ
ಬರಿದೆ ಕರೆವರ ಕೊಂಬು ಮೆಟ್ಟಿ
ಕೂಗೆಂದ ಕೂಡಲಸಂಗಮದೇವ.

## ಅಕ್ಕಮಹಾದೇವಿ

ಬೆರೆಸುವಡೆ ಬೇಗ ತೋರ!
ಹೊರಹಾಕದಿರಯ್ಯ! ನಿಮ್ಮಲ್ಲಿಗೆ
ಸಲೆ ಸಂದ ತೊತ್ತಾನು,
ಎನ್ನ ಹೊರೆಹಾಕದಿರಯ್ಯ
ಚೆನ್ನಮಲ್ಲಿಕಾರ್ಜುನಯ್ಯ,
ನಿಮ್ಮ ನಂಬಿ ಬೆಂಬಳಿ ಬಂದೆನು
ಇಂಬುಗೊಳ್ಳಯ್ಯ ಬೇಗದಲಿ

ಹೊಳೆವ ಕೆಂಜೆಡೆಗಳ
ಮಣಿಮುಕುಟದ ಒಪ್ಪುವ
ಸುಲಿಪಲ್ಗಳ ನಗೆಮೊಗದ ಕಂಗಳ
ಕಾಂತಿಯಿಂ ಈರೇಳು ಭವನಮಂ
ಬೆಳಗುವ ದಿವ್ಯ ಸ್ವರೂಪನಂ
ಕಂಡೆ ನಾನು ಕಂಡೆನ್ನ ಕಂಗಳ ಬರ
ಹಿಂಗಿತ್ತಿಂದೆನಗೆ ಗಂಡ ಗಂಡರನ್ನೆಲ್ಲ
ಹೆಂಡ ಹೆಂಡಿರಾಗಿ ಆಳುವ ಗುರುವನ



ಕಂಡೆ ನಾನು! ಜಗದಾದಿ ಶಕ್ತಿಯೊಳು
ಬೆರೆಸಿ ಒಡನಾಡುವ ಪರಮ ಗುರು
ಚೆನ್ನಮಲ್ಲಿಕಾರ್ಜುನನ ನಿಲವ ಕಂಡು
ಬದುಕಿದೆನು.

ಹೊಳೆವ ಕೆಂಜೆಡೆಗಳ ಮೇಲೆ
ಎಳೆವೆಳುದಿಂಗಳು ಫಣಿಮಣಿ
ಕರ್ಣಕುಂಡಲವ ನೋಡವ್ವ! ರುಂಡ
ಮಾಲೆಯ ಕೊರಳವನ ಕಂಡೊಡೆ
ಒಮ್ಮೆ ಬರಹೇಳವ್ವ ಗೋವಿಂದನ
ನಯನ ಉಂಗುಟದ ಮೇಲಿಪ್ಪುದು
ಚೆನ್ನಮಲ್ಲಿಕಾರ್ಜುನ ದೇವಂಗಿದು
ಕುರುಹವ್ವ.

ಕಾಯ ಮೀಸಲಾಗಿ
ನಿನಗರ್ಪಿತವಾಯಿತ್ತು ಕರಣ
ಮೀಸಲಾಗಿ ನಿನಗರ್ಪಿತವಾಯಿತ್ತು
ಆನೊಂದರಿಯೆನಯ್ಯಾ ಎನ್ನ ಗತಿ
ನೀನಾಗಿ, ಇನ್ನ ಮತಿ ನೀನಾಗಿ, ಪ್ರಾಣ
ನಿನಗರ್ಪಿತವಾಯಿತ್ತು, ನೀನಲ್ಲದೆ
ಪೆರತೊಂದ ನೆನೆದರೆ ಆಣೆ ನಿಮ್ಮಾಣೆ
ಚೆನ್ನಮಲ್ಲಿಕಾರ್ಜುನ.

## ಕವಿ ಪರಿಚಯ

**ಬಸವಣ್ಣ :** ಕನ್ನಡ ನಾಡಿನ ಇತಿಹಾಸದಲ್ಲಿ ಮುಖ್ಯವ್ಯಕ್ತಿಯಾದರೂ ಬಸವಣ್ಣನ ಜೀವನದ ಬಗ್ಗೆ ಇದೇ ಸರಿಯೆಂದು ಹೇಳಲಾಗುವುದಿಲ್ಲ. ಹೆಚ್ಚು ಸಮ್ಮತವಾಗಿರುವಂತೆ ಇವನು ಬಾಗೇವಾಡಿಯಲ್ಲಿ ಮಾದರಸ – ಮಾದಲಾಂಬಿಕೆ ದಂಪತಿಗಳ ಮಗನಾಗಿ ಹುಟ್ಟಿ ವೈದಿಕ ಧರ್ಮವನ್ನು ತಿರಸ್ಕರಿಸಿ ಕೂಡಲಸಂಗಮಕ್ಕೆ ಬರುತ್ತಾನೆ. ಆ ನಂತರ ಕಲ್ಯಾಣದಲ್ಲಿ ನಡೆದ ಶರಣ ಚಳುವಳಿಯಲ್ಲಿ ಮುಂಚೂಣಿಯಲ್ಲಿದ್ದು ಸಾಮಾಜಿಕ, ಧಾರ್ಮಿಕ ಬದಲಾವಣೆಗೆ ಹೋರಾಡಿದವನು. ಅಷ್ಟು ಮಾತ್ರವಲ್ಲದೆ ಸಮಾಜ, ಸಾಹಿತ್ಯ, ಸಂಸ್ಕೃತಿ, ಧರ್ಮ ಇತ್ಯಾದಿಗಳು ವೈಚಾರಿಕ ನೆಲೆಗಟ್ಟಿನಲ್ಲಿ ನಿಲ್ಲಬೇಕೆಂದು

ಬಯಸಿದವನು ಮತ್ತು ಅದಕ್ಕಾಗಿ ಪ್ರಾಮಾಣಿಕವಾಗಿ ಪ್ರಯತ್ನಿಸಿದವನು ಬಸವಣ್ಣ. ಮಾರ್ಗ ಪರಂಪರೆಯಿಂದ ಕನ್ನಡ ಸಾಹಿತ್ಯವನ್ನು ದೇಸಿಯ ಕಡೆಗೆ ಹರಿಸಿದ ಪ್ರಮುಖರಲ್ಲಿ ಬಸವಣ್ಣ ಒಬ್ಬ. ಹೀಗಾಗಿ ಕನ್ನಡ ಸಾಹಿತ್ಯ ಸಂಸ್ಕೃತಿಗಳ ಇತಿಹಾಸದಲ್ಲಿ ಶಾಶ್ವತ ಹೆಸರು ಬಸವಣ್ಣನದು. ಇವನ ಅಂಕಿತ ನಾಮ ಕೂಡಲಸಂಗಮದೇವ.

**ಅಕ್ಕಮಹಾದೇವಿ:** ಅಕ್ಕಮಹಾದೇವಿ ಶರಣ ಚಳುವಳಿಯಲ್ಲಿ ಎತ್ತರದ ಚೇತನವಾಗಿ ಮೂಡಿಬಂದ ವ್ಯಕ್ತಿತ್ವ. ಕನ್ನಡ ಸಾಹಿತ್ಯದ ಮೊದಲ ಬರಹಗಾರ್ತಿ ಅಕ್ಕಮಹಾದೇವಿ. ಉಡುತಡಿಯಲ್ಲಿ ಜನಿಸಿದ ಅಕ್ಕ ಎಳೆಯ ವಯಸ್ಸಿನಿಂದಲೇ ಶಿವನನ್ನು ಗಂಡನೆಂದು ಭಾವಿಸಿದ್ದಳು. ಇವಳನ್ನು ಮೋಹಿಸಿದ ಕೌಶಿಕ ಮಹಾರಾಜನನ್ನು ತಿರಸ್ಕರಿಸಿ ಭಕ್ತಿಯ ಮಾರ್ಗವನ್ನು ಅನುಸರಿಸಿದಳು. ಅನುಭವ ಮಂಟಪಕ್ಕೆ ಬಂದು ಅಲ್ಲಮ, ಬಸವಣ್ಣ ಮುಂತಾದವರ ಹಲವು ಪ್ರಶ್ನೆಗಳಿಗೆ ದಿಟ್ಟ ಉತ್ತರ ನೀಡಿ ಇಹದ ಗಂಡರನ್ನು ತಿರಸ್ಕರಿಸಿ ಚೆನ್ನಮಲ್ಲಿಕಾರ್ಜುನನನ್ನು ಗಂಡನೆಂದು ಸ್ವೀಕರಿಸಿ ಸಾಧಾರಣ ಹೆಣ್ಣು ಮಕ್ಕಳಿಗಿಂತ ಭಿನ್ನ ರೀತಿಯಲ್ಲಿ ಬದುಕಿದವಳು. ಚೆನ್ನಮಲ್ಲಿಕಾರ್ಜುನ ಇವಳ ವಚನಗಳ ಅಂಕಿತನಾಮ. ಯೋಗಾಂಗ ತ್ರಿವಿಧಿ ಇವಳ ಇನ್ನೊಂದು ಕೃತಿ.

**ಪ್ರಶ್ನೆಗಳು :**

೧. ಒಳಹೊರಗು ಒಂದಾಗದವರ ಬಗ್ಗೆ ಬಸವಣ್ಣನವರ ಅಭಿಪ್ರಾಯವೇನು?

೨. ಸದ್ಭಕ್ತನಾಗುವ ಬಗೆ ಹೇಗೆ?

೩. ಕೆಟ್ಟವನು ಸದ್ಭಕ್ತನಾಗುವ ಬಗೆಯನ್ನು ಬಸವಣ್ಣ ಹೇಗೆ ನಿರೂಪಿಸುತ್ತಾರೆ?

೪. ಅಕ್ಕ ಮಹಾದೇವಿ ಚೆನ್ನಮಲ್ಲಿಕಾರ್ಜುನನ ದಿವ್ಯಸ್ವರೂಪವನ್ನು ಹೇಗೆ ವರ್ಣಿಸಿದ್ದಾರೆ?

೫. ಅಕ್ಕ ಚೆನ್ನಮಲ್ಲಿಕಾರ್ಜುನನಿಗೆ ತನ್ನನ್ನೆ ಸಮರ್ಪಿಸಿಕೊಳ್ಳುವ ಬಗೆ ಹೇಗೆ?

*



# ೩. ತುಂಗಭದ್ರೆ

– ಕೆ.ಎಸ್. ನರಸಿಂಹಸ್ವಾಮಿ

**ಆಶಯ :**

ತುಂಗಭದ್ರೆಯ ಹೆಸರಿನ ತಮ್ಮ ಮಗಳ "ಬಾಲ್ಯದ ಸೊಬಗಿನ ವರ್ಣನೆಯಿಂದ ಆರಂಭವಾಗುವ ಈ ಕವಿತೆ ಕಡೆಯಲ್ಲಿ ಜೀವನದ ಅನಂತತೆಯ ಪ್ರಶ್ನೆಗಳೊಂದಿಗೆ ಮುಕ್ತಾಯವಾಗುತ್ತದೆ. ಮಗುವಿಗೆ ಬಾಲ್ಯ ದಲ್ಲಿರುವ ಬದುಕಿನ ಮೇಲಿನ ಭದ್ರ ಶ್ರದ್ದೆ ಮತ್ತು ನಂಬಿಕೆ ಮತ್ತು ತಂದೆ, ತಾಯಿಯರ ಅಚಲ ಪ್ರೀತಿಯನ್ನು ಸಂಬಂಧಗಳ ಅರ್ದ್ರತೆಯೊಂದಿಗೆ ಕಟ್ಟಿಕೊಡುವ ಕವಿತೆ ಇದು. ಮುಂದೆ ತುಂಗಭದ್ರೆಯ ಬದುಕಿನ ಹಡಗನ್ನು ತಮ್ಮ ಬದುಕಿನ ಹಡಗಿನ ಜೊತೆ ಸಮೀಕರಿಸುತ್ತಾ ಭವಿಷ್ಯದ ತಲ್ಲಣಗಳನ್ನು ಗೊಂದಲಗಳನ್ನು ಹಾಗೂ ಮಗಳ ಪ್ರೀತಿಯ ನಂಬಿಕೆಯನ್ನು ಜೀವ ಬೆಳಕಾಗಿಸುವ ಆಶಯ ಹೊತ್ತು ಪದ್ಯ ಮುಕ್ತಾಯಗೊಳ್ಳುತ್ತದೆ.

ಈ ತುಂಗಭದ್ರೆ – ಹೊಳೆಯಲ್ಲ – ವರುಷದ ಮಗಳು ;
ಇವಳೆನ್ನ ದೇವರಾಗಿಹಳು. ಮದರಾಸಿನಲಿ
ಬಿರುಗಾಳಿ ಎದ್ದು ಮೈಸೂರಿನಲಿ ಹತ್ತು ಹನಿ
ಮಳೆ ಬಿದ್ದಿತೆನ್ನಿ – ಇವಳಿಗೆ ನೆಗಡಿ: ಬೀದಿಯಲಿ
ಬೇಸಗೆಯ ಬಿಸಿಲು ಸುಳಿದರೆ ಉಷ್ಣ.... ಮನೆಯೊಳಗೆ
ಎಲ್ಲೆಲ್ಲು ಇವಳೆ, ಇವಳದೆ ಮಾತು, ಇವಳಾಟ!
ಈ ತುಂಗಭದ್ರೆ–ಹೊಳೆಯಲ್ಲ–ವರುಷದ ಮಗಳು
ಒಳಗಣ್ಣ ಕಪ್ಪ ಕತ್ತರಿಸುವಳು. ದಿನವೂ ಹಿಡಿದು
'ಅಕ್ಕ, ಅಮ್ಮ' ಎಂದು ಒಲಿಸಿ, ಬಿಸಿನೀರೆರೆದು,
ಮೈತುಂಬ ಹೊದಿಸಿ, ಧೂಪವನಿಟ್ಟು, ತೊಟ್ಟಿಲನು
ರಟ್ಟೆ ಬೀಳುವತನಕ ತೂಗಿ, ಮೆಲುದನಿಯಲ್ಲಿ
ಚೋಳ ಕನ್ನೆಯರ ಭಂಗವನು ಪಲುಕಿದರಿವಳು
ಮಲಗುವಂಥವಳೆ, ಈ ಮಾಯಾಂಗನೆ? ಇಣಿಕಿ,
ಹೆಡೆ ಎತ್ತಿ ನಕ್ಕು ನಗಿಸುವಳು.

ವರುಷದ ಮಗಳು –
ಇವಳೆನಗೆ ಸರ್ಪಗಾವಲು. ಹೊಸಿಲ ದಾಟಿದರೆ
ಬಾಗಿಲಿಗೆ ಬಂದು ಕಾಡುವಳು.... ಸಂಜೆಯತನಕ
ತಾಯ ಬಳಿ ಇವಳ ಅಧಿಕಾರ. ನಡುರಾತ್ರಿಯಲಿ
ನನ್ನೆದೆಗೆ ಇವಳು ದೇವರ ಪದಕ. ಈ ಮಗಳು
ತುಟಿಯ ತೆರೆದರೆ ಸಾಕು ಮೇಲೊಂದು ಸಣ್ಣಕ್ಕಿ,
ಕೆಳತುಟಿಯ ಹಿಂದೆ ಇನ್ನೊಂದು ಹಾಲಿನ ಚುಕ್ಕಿ;
ಬಟ್ಟತಲೆ, ದುಂಡುಮುಖ, ಕಿವಿಯವರೆಗೂ ಕಣ್ಣು,
ಇಷ್ಟಾಗಿ ಶಾಸ್ತ್ರಕ್ಕೆ ಹತ್ತು ಕೂದಲು; ಒಂದು
ಮರುಳು ಜಡೆ, ಅದೂ ಬ್ರಹ್ಮ ಗಂಟು!

ವರುಷದ ಮಗಳ –
ಧೈರ್ಯವೇ ಧೈರ್ಯ. ಆಗಾಗ ಮುಂಗೋಪದಲಿ
ತಂದೆ ಜರೆದರೆ ಇವಳು ತಾಯ ಬಳಿ ಸೇರುವಳು.
ತಾಯಿ ಬೇಸರದಿಂದ ಮತ್ತೊಮ್ಮೆ ಗದರಿದರೆ
ಅಂಬೆಗಾಲಿಡುತ ಕಂಬನಿಯೊಂದನುರುಳಿಸುತ
ಬಂದು ತಂದೆಯ ತೊಡೆಯನೇರುವಳು. ಸಂಸಾರ
ಒಂದು ಸಾಗರ. ನಾನು ಒಂದು ದಡ. ಮೀನಾಕ್ಷಿ
ಇನ್ನೊಂದು ದಡ. ನಡುವೆ ತುಂಗಭದ್ರೆಯ ಹಡಗು
ಚಂದಿರನ ಹೊತ್ತು ಓಡಾಡುವುದು. ಆ ಧೈರ್ಯ
ನನಗಿಲ್ಲ; ನನ್ನಂಥ ಎಷ್ಟೋ ಬಾಳಿಗೆ ಇಲ್ಲ,
ಒಂದು ದಡ ಗದರಿದರೆ ಮತ್ತೊಂದು ದಡವಿಹುದು,
ಅಲ್ಲಿ ತಂಗಿದರೆ ಜೀವಕ್ಕೆ ಮಂಗಳವೆನುವ
ಒಂದು ನಂಬಿಕೆಯಿಂದ – (ಇಂಥ ಅರಿಯದ ಕಂದ
ಎಲ್ಲಿಂದಲೋ ತಂದ ಒಂದು ನಂಬಿಕೆಯಿಂದ)
ಈ ಜೀವ ಬೆಳಕಾಗಿ ಮುನ್ನುಗ್ಗದೆಯೆ, ನಿಂತು,
ಬಿಟ್ಟ ದಡ ಬಲುದೂರವೆಂದು, ತಂಗಲು ಮುಂದೆ
ಇನ್ನೊಂದು ದಡವಿಹುದೊ, ಇಲ್ಲವೋ ಎನುವೊಂದು
ಸಂಶಯದ ಮುಳ್ಳಿಡಿದ ಕಾಡುದಾರಿಗೆ ಬಿದ್ದು
ದಿಕ್ಕುಗೆಟ್ಟಿಹುದು. ತಳಮಳಗೊಂಡು ಎದ್ದೆದ್ದು
ಕನವರಿಸುತಿಹುದು ಮುಂದೇನು ಮುಂದೇನೆಂದು



ಏನ ಬಹುದೋ ಎಂದು, ಏನು ಬಹುದೋ ಎಂದು
ಏನು ಬಹುದೋ ಎಂದು, ನೊಂದು, ನೊಂದು.

## ಕವಿ ಪರಿಚಯ

ಕೆ.ಎಸ್. ನ. ಎಂದೇ ಜನಪ್ರಿಯರಾಗಿರುವ ಕೆ.ಎಸ್. ನರಸಿಂಹಸ್ವಾಮಿ ಕನ್ನಡ ನವೋದಯ ಪರಂಪರೆಯ ಕಾಲಘಟ್ಟದಲ್ಲಿ ಪ್ರವೇಶಿಸಿದ ಮಹತ್ವದ ಕವಿ 'ಮೈಸೂರು ಮಲ್ಲಿಗೆ' ಕನ್ನಡ ಸಾಹಿತ್ಯದಲ್ಲಿ ದಾಖಲೆ ಮುರಿದ ಕೃತಿ. ಮಲ್ಲಿಗೆಯ ಕವಿ ಎಂದೇ ಜನಪ್ರಿಯರಾದ ಇವರು ನವ್ಯ ಕಾಲಘಟ್ಟಕ್ಕೆ ತಮ್ಮ ಕಾವ್ಯದ ಮಾದರಿಗಳನ್ನು ಹೊರಳಿಸಿದರು. ೧೯೧೫ ರಲ್ಲಿ ಜನಿಸಿದ ಇವರ ಪ್ರಮುಖ ಕವನ ಸಂಕಲನಗಳೆಂದರೆ ಮೈಸೂರು ಮಲ್ಲಿಗೆ', ದೀಪದ ಮಲ್ಲಿ, ಐರಾವತ, ಮನೆಯಿಂದ ಮನೆಗೆ, ಉಂಗುರ, ಶಿಲಾಲತೆ, ನವ ಪಲ್ಲವ, ತೆರೆದಬಾಗಿಲು ಇವರ ತೆರೆದ ಬಾಗಿಲು, ದುಂಡು ಮಲ್ಲಿಗೆ, ಮಲ್ಲಿಗೆಯ ಮಾಲೆ ಇವರ ಸಮಗ್ರ ಕಾವ್ಯ ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪುರಸ್ಕಾರ ದೊರೆತಿದೆ. ಪಂಪ ಪ್ರಶಸ್ತಿಯನ್ನು ಪಡೆದುಕೊಂಡಿದಾರೆ. ಇವರು ೧೯೯೦ ರಲ್ಲಿ ಮೈಸೂರಿನಲ್ಲಿ ನಡೆದ ಅಖಿಲ ಭಾರತ ೬೦ನೆಯ ಕನ್ನಡ ಸಾಹಿತ್ಯ ಸಮ್ಮೇಳನ ಅಧ್ಯಕ್ಷರೂ ಆಗಿದ್ದರು.

**ಪ್ರಶ್ನೆಗಳು :**

೧. ಕವಿ ತುಂಗಭದ್ರೆಯನ್ನು ಮಾಯಾಂಗನೆ ಎಂದು ಕರೆಯಲು ಕಾರಣವೇನು?

೨. ವರುಷದ ಮಗಳ ಧೈರ್ಯ ಕವಿತೆಯಲ್ಲಿ ಹೇಗೆ ವ್ಯಕ್ತವಾಗಿದೆ?

೩. ತುಂಗಭದ್ರೆಯ ಹಡಗಿನ ಧೈರ್ಯ ಎಂತಹುದು?

೪. ತುಂಗಭದ್ರೆ ಜೀವ ಬೆಳಕಾಗುವ ಪರಿ ಎಂತಹುದು?

೫. ತುಂಗಭದ್ರೆ ಕವಿತೆಯಲ್ಲಿ ಕವಿಗೆ ಉಂಟಾದ ಗೊಂದಲವೇನು?

೬. ತುಂಗಭದ್ರೆ ಕವಿತೆಯ ಆಶಯವೇನು?

*

# ೪. ವರ್ಧಮಾನ

– ಎಂ. ಗೋಪಾಲಕೃಷ್ಣ ಅಡಿಗ

**ಆಶಯ :**

ಅಡಿಗರ ವರ್ಧಮಾನ ಕವಿತೆ ಜೀವನದ ಹಲವು ಮುಖ್ಯ ಮಜಲುಗಳನ್ನು ಕುರಿತು ಮಾಡಿದ ಕಲಾತ್ಮಕವಾದ ಪ್ರಬುದ್ಧ ವಿಮರ್ಶೆಯಾಗಿದೆ. ಹರೆಯದ ಮನಸ್ಸಿನ ಕ್ರಾಂತಿಭಾವ, ವರ್ತಮಾನದ ಏರಿಳಿತಗಳಿಂದ ಕೂಡಿದ ನಡವಳಿಕೆ, ಅದನ್ನು ಕಂಡ ಹಿರಿತಲೆಮಾರು ಕಳವಳಗೊಳ್ಳುತ್ತಿರುವ ಬಗೆಯನ್ನು ಚಿತ್ರಿಸುತ್ತದೆ. ಪರಿವರ್ತನೆಗಳೆಲ್ಲವನ್ನೂ, ಒಪ್ಪಿಕೊಳ್ಳುತ್ತಾ ಜೀರ್ಣಿಸಿಕೊಳ್ಳುತ್ತಾ ವರ್ತಮಾನವನ್ನು ಸನಾತನಕ್ಕೆ ಕೊಂಡಿಹಾಕುತ್ತಾ ನಡೆಯುತ್ತಿರುವ ಬದುಕಿನ ಸ್ವರೂಪದ ಬಗ್ಗೆ ಕವಿಯ ಎಚ್ಚರ, ವರ್ತಮಾನದ ವೈಲಕ್ಷಣ್ಯಗಳಿಗೆ ಕಳವಳಗೊಳ್ಳದೆ ಬದುಕು ಸಾರ್ಥಕವಾಗಿ ವಿಕಾಸಗೊಳ್ಳುವ ಪರಿ ಈ ಪ್ರಕಟಗೊಳ್ಳುವ ಬಗೆ ಅನನ್ಯವಾದುದು. ಗೊತ್ತುಗುರಿಯಿಲ್ಲದೆ ಅಜ್ಞಾನ ಆತ್ಮ ಪರಿವೀಕ್ಷಣೆಗೆ ತೊಡಗಿ ಸ್ವಯಂ ಸ್ಫುರಿಸಿ ಹನುಮದ್ವಿಕಾಸಕ್ಕೆವಾಗುವ, ಜೀವನದ ಎಲ್ಲಾ ಬಗೆಯ ಸಾಧನಗಳ ಮುಖ್ಯ ಮಜಲುಗಳ ಧ್ವನಿ ಶಿಲ್ಪ ಈ ಕವಿತೆ.

ತನ್ನ ರಾಜಕುಮಾರತನದ ಮೀಸೆ ಚಿಗುರು
ದೇಶ ಕಾಣದ ಹಾಗೆ ನೆರೆದು, ಕತ್ತಿನ ಕುಣಿಕೆ
ಹರಿದು ಹರವೋ ಹರ. ಹುಲ್ಲು, ದರೆ, ಗಿಡ, ಹೊದರು –
ಎಲ್ಲವನ್ನೆತ್ತೆತ್ತಿ ಕುತ್ತಿ ತೀರದ ತುರಿಕೆ
ಮೊಳೆವ ಕೊಂಬಿಗೆ. ಅರಬ್ಬಿಠಾಕಣ ಸವಾರಿಯ ಪೊಗರು
ನಾಣಿಮಗ ಶೀನಿಗೆ. ಆಕಾಶ ಕೈಗೆಟುಕದಿದ್ದಕ್ಕೆ,
ಕೋಶಾವಸ್ಥೆ ಮರಳಿಬಾರದ್ದಕ್ಕೆ, ತನಗಿಂತ ಮೊದಲೆ ತನ್ನಪ್ಪ ಹುಟ್ಟಿದ್ದಕ್ಕೆ,
ಮೊಲೆ ಬಿಡಿಸಿದವಮಾನ ಮುಯ್ಯಿ ತೀರದ್ದಕ್ಕೆ
ರೊಚ್ಚು; ಕೊಚ್ಚುತ್ತಾನೆ ಗಾಳಿಮೋಪು;
ರೇಗಿ ಕಿರುಚುತ್ತಾನೆ ಭಾರಿ ರೋಪು;
ಹೂಂಕರಿಸಿ ಹಾರುತ್ತಾನೆ ಮೂರು ಗುಪ್ಪು.



೨

ಕಿಲಾಡಿರಸ್ತೆಯ ಕೊನೆಯ ತಿರುವಿನಲ್ಲಪಘಾತ
ನ ಪ್ರಮದಿತವ್ಯ ಬೋರ್ಡಿನ ಕೆಳಗೆ. ಹೆದ್ದಾರಿ
ಬಿಟ್ಟು ಬಿದ್ದೆದ್ದು ಹೆದ್ದಾರಿ ಹಿಡಿವುತ್ತಾತ
ವರ್ಧಮಾನದ ವರಾತ. ಬಿದ್ದು ಮೊಣಕಾಲೂರಿ,
ತರಿದ ಮೈ ಕೈ, ಹರಿದ ರೆಕ್ಕೆ, ಜಜ್ಜಿದ ಚಹರೆ
ಉಜ್ಜುವುದು ನಭದ ತುರುಚಿಗೆ. ಗಾಳಿಗುದುರೆ ಸವಾರಿ
ಗುಬ್ಬಿಸಿದ ಹಿಪ್ಪಿಗೆಳೆಯರು ದೂರ ದೂರ ಗೆಲ್ಲಿನ ಮೇಲೆ
ಹುಬ್ಬೇರಿಸುವರು, ಹಲ್ಕಿರಿಯುವರು, ತಮ್ಮೇಕತಾರಿ ಜೋಗುಳ ಹೀರಿ
ತೂಕಡಿಸುವರು. ಕಂದಕ ತುಂಬಿ ಬಿದ್ದಿರುವ ಭೂತ ವಿರಾಧ
ನ ಸುತ್ತಲೂ ಕಣ್ಣುಗುಡ್ಡೆ, ತಲೆಬುರುಡೆ, ಹೃತ್ಪಿಂಡ ಚರು.
ಕರುಳ ಗೋಜಲು ತೊಡರಿ ಬಿದ್ದೆದ್ದು ಹರೆವ ಕುಮಾರ
ಕಂಠೀರವಾಭಿನಯ ಕಂಡು ನಲಿವವರಿಲ್ಲ. ಸುನೀತಿ ಕಣ್ಣೀರು ಸುರು
ಚಿಯ ತಿರಸ್ಕಾರ ಗುರು, ಸುಗ್ರಿವಾಜ್ಞೆ ಹೊತ್ತ ವೀರಾಧಿವೀರ
ನಿಗೆ ಆಜ್ಞೆಯೊಕ್ಕಣೆ ಮರೆವು. ಅಂತೂ ತೆವಳಿ ತನ್ನುಸುರು
ತನ್ನ ಮಂಡಿಸಾಧನೆಗೆ ತಾನೆ ಚಪ್ಪಾಳೆ
ತಟ್ಟಿ ತಡುಕುತ್ತ ತೊಳಲುತ್ತ ಮುನ್ನುಗ್ಗಿದರೆ
ಸರಿ, ಇಲ್ಲ, ತನ್ನ ತನ್ನ ಕಿಷ್ಕಿಂಧಕ್ಕೆ,
ತನ್ನ ಶ್ರಾಪಗ್ರಸ್ತ ಸೆರೆಗೆ ತಾನೇ ಪಹರೆ

೩

ಕೊರಕಲಿನ ದಂಡೆಯರೆ ಮೇಲೆ ಕುಳಿತಿದ್ದೇನೆ
ಸಿಗರೇಟು ಹಚ್ಚಿ ಸೇದುತ್ತ ಸುಡುವುರಿಯಲ್ಲಿ
ಬೇಸಗೆಯ ಮದ್ಯಾಹ್ನ, ಕೆಳಗೆ ಅಳಲುತ್ತಾನೆ
ಪಂಚಾಗ್ನಿ ಮಧ್ಯಸ್ಥ ಮಗ. ಕೂಗಿ ಕೂಗಿ ಕರೆಯುತ್ತಾನೆ ಮಂಡೆ ಬಿಸಿ
ಕಂದ ಕಿವುಡಾಗಿದ್ದಾನೆ. ಅಥವಾ ಅವನ ಭಾಷೆಯೇ
ಬೇರೊ? ಕಿವುಚುವ ಕರುಳ ಹಿಡಿದು ಕೊರಗುತ್ತೇನೆ: ರಾತ್ರಿ
ನಿದ್ದೆಯೇ ಇಲ್ಲ; ಕಳೆಗೆಟ್ಟ ಮುಖ; ತೊಟ್ಟಿರುವ ಹಿಸಿ
ದು ಹರಕಲು, ಹಗಲೆಲ್ಲ ಹಿಪ್ಪಿಗಳ ಜೊತೆ ಹೀರಿ
ಹಿಪ್ಪೆಯಾಗಿದ್ದಾನೆ. ನನ್ನ ಪ್ರತಿರೂಪ ಹುಡಿಗೊಳ್ಳುವೀ ಕಸಿ
ವಿಸಿಗೆ ಕಂಗಾಲಾದೆ. ಮುತ್ತಜ್ಜ ಕಟ್ಟಿದ್ದ ಮನೆ

ದೀಪ ಹಚ್ಚುವರಿಲ್ಲ. ಶ್ರದ್ಧೆ ಕೊಡುವನ್ನ ನೀರಿಲ್ಲದೆಯೆ
ಉರುಳುವರು ಪಿತೃಪಿತಾಮಹರು. ಹೊಕ್ಕುಳಿನ ಬಳ್ಳಿ
ಕತ್ತರಿಸಬಾರದೋ – ಏನೋ. ಬಿತ್ತಕ್ಕೆ ಬೇರಿನ ಚಿಂತೆ
ಇಲ್ಲ, ಆದಷ್ಟು ದೂರ ಟಣ್ಣೆಂದೆಗರಿ
ಬಿಚ್ಚವುದು ತನ್ನ ಮಾಯಾ ಪಟವ. ಪ್ರಾಯದ ಲಹರಿ
ಗೆಲ್ಲಿ ಯಾವುದು ತೀರ, ಯಾವ ನೆಲೆ, ಯಾವ ಗುರಿ?

೪

ಗಹ್ವರದ ಒಳಗತ್ತಲಲ್ಲಿ ಸುತ್ತಲು ತಡಕಿ ತಡೆದು ನಡೆಯುವ,
ನಡೆದು ಮುಗ್ಗರಿಸಿ ಬಿದ್ದೆದ್ದು ಹರೆವ, ಹರಿಯುವ ಜಾಡು
ಹಿಡಿವ, ಗುರುತಿಸುವ, ಬೇರ ಬಗೆವ, ಕಳೆದದ್ದನ್ನು ಪಡೆವ,
ಪಡೆದದ್ದಕ್ಕೆ ಪಡಿ ಹತ್ತು ಹಡೆವ ಕವನದ ಕರಡು
ಸಿದ್ಧಪಡಿಸುವ ಕವ್ಯ ವರ್ಧಮಾನಗೆ. ತನ್ನ ತಾನೇ ತಿಕ್ಕಿ
ತಿಕ್ಕಿ, ಚಕಮಕಿಯ ಕಿಡಿಯುಕ್ಕಿಯುಕ್ಕಿ, ಕತ್ತಲ ಹೊಟ್ಟೆ
ಹೊಕ್ಕು ಹೊಯ್ಯುವ ಹವ್ಯ. ಗಹ್ವರವಾಸದೆಕ್ಕಟಿಮೊಟ್ಟೆ
ಹೊತ್ತು ಸಲ್ಲುವುದೆ ಗುರುದಕ್ಷಿಣೆ. ದೂರದ ಕಡಲ ತೆರೆ ಸೊಕ್ಕಿ
ಬಡಿವ, ಬಾರಿಸುವ ಮರ್ಮರಲಾಲಿಲಯಕ್ಕೆ ಸರಿದೊರೆ ಬಡಿವ
ಕಡಿವ ಚಾಣದ ಪೆಟ್ಟುಪೆಟ್ಟಿಗೂ ಹಲ್ಲುಗುರುಕೊಂಬು ಇವು ಅಷ್ಟಿಷ್ಟು
ಸವೆದು ಸಾಕ್ಷಾತ್ಕಾರಗೊಳ್ಳಬಹುದಾದ ಅಂಶಾವ
ತಾರ ಹೋರೆ. ಉರಿ ಹತ್ತಿ ಕೊಳ್ಳಿ ಧಗಧಗಿಸಿ ಕತ್ತಲ ಮಷ್ಟು
ಹೊತ್ತಿಕೊಳ್ಳಲಿ. ಸ್ವಯಂಪ್ರಭೆ ಸ್ಫುರಿಸುವುದೆ ಆದ್ಯ
ಸ್ವರಿತ – ಉದಾತ್ತ ಅನುದಾತ್ತಶತಪಥದಲ್ಲಿ.

ಗಹ್ವರದ ಮುಖ ಅಲ್ಲ, ಆಚೆ ಬಯಲು ಬರಾವು,
ಹಣ್ಣು ಹಂಪಲು ಹಸುರ ಬಲ್ಲೆ, ಬಲ್ಲೆ;
ಜೀವನನಿಧಾನಶ್ರುತಿ ಶುದ್ಧಿ ಮೊರೆವ ಕರಾವು;
ಹನುಮದ್ವಿಕಾಸಕ್ಕೆ ಇಲ್ಲ ಎಲ್ಲೆ.



## ಕವಿ ಪರಿಚಯ

ಎಂ.ಗೋಪಾಲಕೃಷ್ಣ ಅಡಿಗರು ಕುಂದಾಪುರ ತಾಲ್ಲೂಕಿನ ಮೊಗೇರಿಯವರು. ೧೮–೨–೧೯೧೮ ರಲ್ಲಿ ಜನಿಸಿದ ಅಡಿಗರು ಮೈಸೂರು ವಿಶ್ವವಿದ್ಯಾಲಯ ಹಾಗೂ ನಾಗಪುರ ವಿಶ್ವವಿದ್ಯಾಲಯದಲ್ಲಿ ಕ್ರಮವಾಗಿ ಬಿ.ಎ ಆನರ್ಸ್ ಹಾಗೂ ಇಂಗ್ಲೀಷ್ ಎಂ.ಎ ಪದವಿ ಪಡೆದರು. ಹೈಸ್ಕೂಲು ಅಧ್ಯಾಪಕರಾಗಿ ಕನ್ನಡದ ಹೆಸರಾಂತ ಸಾಕ್ಷಿ ಪತ್ರಿಕೆ ಆರಂಭಿಸಿದವರು. ಲಾಲ್ ಬಹದ್ದೂರ್ ಕಾಲೇಜ್ ಸಾಗರ ಹಾಗೂ ಪೂರ್ಣ ಪ್ರಜ್ಞ ಕಾಲೇಜು ಉಡುಪಿಯಲ್ಲಿ ಪ್ರೊಫೆಸರ್ ಹಾಗೂ ಪ್ರಿನ್ಸಿಪಾಲರಾಗಿ ಕರ್ತವ್ಯ ನಿರ್ವಹಿಸಿದರು.

ನವ್ಯ ಕನ್ನಡ ಕಾವ್ಯದಲ್ಲಿ ಒಂದು ಕ್ರಾಂತಿಯನ್ನೇ ಮಾಡಿ ಕನ್ನಡ ಕಾವ್ಯ ಪರಂಪರೆಯ ಒಂದು ಭಾಗವೇ ಆಗಿದ್ದಾರೆ. ನವ್ಯಕವಿಗಳ ಒಂದು ಪೀಳಿಗೆಯೇ ಇವರ ಮಾರ್ಗದಲ್ಲಿ ನಡೆದು ಕನ್ನಡ ಕಾವ್ಯ ಸಂಪತ್ತನ್ನು ಸಮೃದ್ಧಿಗೊಳಿಸಿದ್ದು ಚರಿತ್ರಾರ್ಹವಾದುದು. ಚಂಡಮದ್ದಳೆ, ಭಾವತರಂಗ, ಭೂಮಿಗೀತ, ವರ್ಧಮಾನ ಮುಂತಾದ ಕವನ ಸಂಕಲನಗಳು ಆಕಾಶ ದೀಪ, ಅನಾಥೆ, ಕಾದಂಬರಿ. ಹುಲಿರಾಯ ಮತ್ತು ಇತರೆ ಕಥೆಗಳು ಕಥಾಸಂಕಲನ ಮಣ್ಣಿನ ವಾಸನೆ, ಕನ್ನಡದ ಅಭಿಮಾನ – ವಿಚಾರ ವಿಮರ್ಶಾ ಲೇಖನಗಳು ನೆನಪಿನ ಗಣಿಯಿಂದ ಆತ್ಮಚರಿತ್ರೆ, ಸುವರ್ಣಸಾಹಿತ್ಯ ರೈತರ ಹುಡುಗಿ, ನಾಲ್ಕು ಮಂದಿಗೆಳೆಯರು ಮುಂತಾದ ಅನುವಾದ ಸಾಹಿತ್ಯ.

ವರ್ಧಮಾನ ಕವನ ಸಂಗ್ರಹಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಕಬೀರ್ ಸಮ್ಮಾನ್ ಪ್ರಶಸ್ತಿ, ಪಂಪ ಪ್ರಶಸ್ತಿಗಳು ಇವರಿಗೆ ಲಭಿಸಿದೆ.

**ಪ್ರಶ್ನೆಗಳು :**

೧. ವರ್ಧಮಾನ ಕವಿತೆಯ ಆಶಯವೇನು?

೨. ವರ್ತಮಾನದ ತಲ್ಲಣಗಳು ವರ್ಧಮಾನ ಕವಿತೆಯಲ್ಲಿ ಹೇಗೆ ವ್ಯಕ್ತಗೊಂಡಿದೆ.

೩. ಹರೆಯದ ಆಕ್ರೋಶವನ್ನು ಕವಿ ಹೇಗೆ ವ್ಯಕ್ತಡಿಸಿದ್ದಾರೆ?

೪. ಪರಂಪರೆಯ ಅಂತರವನ್ನು ವರ್ಧಮಾನ ಕವಿತೆಯಲ್ಲಿ ಗುರುತಿಸಬಹುದೇ ಚರ್ಚಿಸಿ.

೫. ವ್ಯಕ್ತಿಯ ಮನಸ್ಸಿನ ವಿಕಾಸದ ಹಂತಗಳನ್ನು ವರ್ಧಮಾನ ಕವಿತೆ ಹೇಗೆ ಕಟ್ಟಿಕೊಡುತ್ತದೆ ಚರ್ಚಿಸಿ.

*